# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ನೆಲಮಂಗಲ ತಾಲ್ಲೂಕು, ಮಣ್ಣೆ ಗ್ರಾಮ ಪಂಚಾಯತ್ ಕಣ್ಣೋಹಳ್ಳಿಯಿಂದ ಮಣ್ಣೆ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯಡಿ ಪೈಪ್ ಲೈನ್ ಕಾಮಗಾರಿಯಲ್ಲಿ ನಿರ್ವಹಿಸದೇ ಹಣ ಪಾವತಿಸಲಾಗಿದೆ ಎಂಬ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರ ತನಿಖೆ, ವಿವರವಾದ ಇಲಾಖೆ ವಿಚಾರಣೆಗೆ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

**ಓದಲಾಗಿದೆ :**

| | |
|---|---|
| 1. | ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ್/ಬಿ.ಡಿ/4398/2014//ಎಆರ್‌ಎಲ್‌ಓ-2, ದಿನಾಂಕ:27.5.2017. |
| 2. | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ಉಪಲೋಕ್/ಡಿ/4398/2014//ಎಆರ್‌ಎಲ್‌ಓ-2, ದಿನಾಂಕ:6.5.2017. |

**<u>ಪ್ರಸ್ತಾವನೆ:-</u>**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:27.5.2017 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:06.5.2017 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಮಂಜುನಾಥ, ತಂದೆ ಚಿಕ್ಕರಾಮಯ್ಯ, ಮಣ್ಣೆ ಗ್ರಾಮ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲೂಕು ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನಲ್ಲಿ ಮಣ್ಣೆ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯಡಿ ಪೈಪ್‌ಲೈನ್ ಅಳವಡಿಸಿದ್ದು, ಪಂಪು ಮೋಟರ್ ಗ್ರಾಮ ಪಂಚಾಯತ್‌ನಿಂದ ನೀಡಲಾಗಿರುತ್ತದೆಯೆಂದು, ಅದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ನೆಲಮಂಗಲ ಇವರು ಗುತ್ತಿಗೆದಾರರಾದ ಶಿವಕುಮಾರ್ ಎಂಬುವರ ಹೆಸರಿಗೆ ಆಗದೇ ಇರುವ ಕೆಲಸಕ್ಕೆ ಬಿಲ್ ಮಾಡಿ ರೂ.2,65,548/- ಗಳನ್ನು ಪಾವತಿಸಿ, ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಇದಕ್ಕೆ (1) ಶ್ರೀ ಸತೀಶ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ (2) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ನೆಲಮಂಗಲ (3) ಶಿವಕುಮಾರ್ ಕಂಟ್ರಾಕ್ಟರ್, (4) ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ನೆಲಮಂಗಲ (5) ಎಂ.ಜಿ.ರಾಮಮೋಹನ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ ನೆಲಮಂಗಲ ಮತ್ತು (6) ಶ್ರೀ ಜಿ.ಡಿ. ಶೇಖರ್ ಮೂರ್ತಿ, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನೆಲಮಂಗಲ ಇವರು ಕಾರಣರಾಗಿರುತ್ತಾರೆಂದು ಆರೋಪಿಸಿರುತ್ತಾರೆ.

ಸದರಿ ಆಪಾದನೆ ಕುರಿತು ಮಾನ್ಯ ಉಪಲೋಕಾಯುಕ್ತರು ಎಲ್ಲಾ ಆರು ಅಧಿಕಾರಿ/ನೌಕರರಿಂದ ಹೇಳಿಕೆಯನ್ನು ಪಡೆದಿದ್ದು, ಆಕ್ಷೇಪಿತ ಕಾಮಗಾರಿಯನ್ನು ಎಂ.ಜಿ.ರಾಮಮೋಹನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಜಿ.ಡಿ. ಶೇಖರ್ ಮೂರ್ತಿ, ಕಿರಿಯ ಇಂಜಿನಿಯರ್ ಇವರು ನಿರ್ವಹಿಸಿದ್ದು, ಉಳಿದ ಮೂವರು ಅಧಿಕಾರಿ/ನೌಕರರು ಯಾವುದೇ ಕೆಲಸ ನಿರ್ವಹಿಸದ ಕಾರಣ ಅವರನ್ನು ಪ್ರಕರಣದಿಂದ ಕೈ ಬಿಡುವುದು ಸೂಕ್ತವೆಂದು ಹಾಗೂ ಮತ್ತೊಬ್ಬರು ಖಾಸಗಿ ವ್ಯಕ್ತಿಯಾಗಿರುವುದರಿಂದ ಅವರನ್ನು ಪ್ರಕರಣದಿಂದ ಕೈ ಬಿಡುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಮೇಲಿನ ಇಬ್ಬರು ಅಪಾದಿತರು ಕಾರ್ಯನಿರ್ವಹಿಸಿದ ಅವಧಿ ಹಾಗೂ ಕಾಮಗಾರಿಯನ್ನು ನಿರ್ವಹಿಸಿದ ಅವಧಿಯನ್ನು ಪರಿಶೀಲಿಸಿ, ಕಾಮಗಾರಿಯು ದಿನಾಂಕ:15.9.2014 ರಿಂದ 15.10.2015 ರ ಅವಧಿಯಲ್ಲಿ ಪೂರ್ಣಗೊಂಡಿದ್ದು, ಅದರೆ ಬಿಲ್ ಮೊತ್ತವನ್ನು ದಿನಾಂಕ:27.10.2014 ರಂದು ಬಿ.ಆರ್. ನಂ-370 ರ ಪ್ರಕಾರ ನೀಡಲಾಗಿರುತ್ತದೆಯೆಂದು ಅಂದಾಜು ಪತ್ರಿಕೆ, ವರ್ಕ ಆದೇಶ ಹಾಗೂ ಒಪ್ಪಂದ ಪತ್ರದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲವೆಂದು, ಹಿಂದಿನ ಯೋಜನೆಯಲ್ಲಿ ಮಾಡಿದ ಕಾಮಗಾರಿಯನ್ನು ಪುನ: ಮುಂದಿನ ಯೋಜನೆಯಲ್ಲಿ ತೋರಿಸಿ, ಅಕ್ರಮವಾಗಿ ಬಿಲ್ ಪಾವತಿಸಿರುವುಧು ಕಂಡು ಬರುತ್ತದೆಯೆಂದು, ಅಪಾದಿತರಾದ ಎಂ.ಜಿ.ರಾಮಮೋಹನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಜಿ.ಡಿ.ಶೇಖರ್ ಮೂರ್ತಿ, ಕಿರಿಯ ಇಂಜಿನಿಯರ್ ಇವರು ಸದರಿ ಕಾಮಗಾರಿಯನ್ನು ನಿರ್ವಹಿಸಿದ ಜವಾಬ್ದಾರಿಯನ್ನು ಹೊಂದಿದ್ದು, ಸದರಿಯವರುಗಳು ನೀಡಿರುವ ಉತ್ತರವು ಇಲಾಖಾ ವಿಚಾರಣೆಯನ್ನು ಕೈ ಬಿಡಲು ಸೂಕ್ತ ಹಾಗೂ ಸಮಾಧಾನಕರವಾಗಿರುವುದಿಲ್ಲವೆಂದು ಅಪಾಧಿತರು ಸರ್ಕಾರಿ ನೌಕರರಾಗಿದ್ದು, ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಟೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ, ಕ.ನಾ.ಸೇ (ನಡತೆ) ನಿಯಮಗಳು 1966 ನಿಯಮ 3(1) ರ ಉಲ್ಲಂಘಿಸಿರುವುದರಿಂದ ಅಪಾದಿತರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ವಹಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿಯನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಕಣ್ಣೋನಹಳ್ಳಿ ಗ್ರಾಮದ ಕಿರು ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದಂತೆ ವರ್ಕಆರ್ಡ್ ಆದೇಶ ಲಭ್ಯವಿಲ್ಲದೆ ಇರುವುದು, ಕಾಮಗಾರಿಯನ್ನು ಮುಕ್ತಾಯಗೊಳ್ಳುವ ಒಂದು ವರ್ಷಕ್ಕೂ ಮುಂಚೆ ಬಿಲ್ ಪಾವತಿಸಿರುವುದು, ಅಂದಾಜು ಪತ್ರಿಕೆ, ಒಪ್ಪಂದದ ಪತ್ರದ ದಾಖಲೆಗಳು ಒಂದಕ್ಕೊಂದು ತಾಳೆಯಾಗದಿರುವುದನ್ನು ಗಮನಿಸಿದಲ್ಲಿ ಹಿಂದಿನ ವರ್ಷಗಳಲ್ಲಿ ನಿರ್ಮಾಣ ಮಾಡಿ ಹಣ ಪಾವತಿಸಿದ ಕಾಮಗಾರಿಗಳನ್ನೇ ನಂತರದ ವರ್ಷದಲ್ಲಿ ತೋರಿಸಿ, ಹಣ ಪಾವತಿಸಲು ಕ್ರಮವಹಿಸಿರುವ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಅಪಾದಿತರು ಸರ್ಕಾರಿ ನೌಕರರಾಗಿದ್ದು ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಟೆ, ಪ್ರಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಕಂಡು ಬರುವುದರಿಂದ ಅಪಾದಿತರಾದ ಎಂ.ಜಿ.ರಾಮಮೋಹನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಜಿ.ಡಿ. ಶೇಖರ್ ಮೂರ್ತಿ, ಕಿರಿಯ ಇಂಜಿನಿಯರ್ ಇವರುಗಳ ವಿರುದ್ಧ

ವಿವರವಾದ ಇಲಾಖೆ ವಿಚಾರಣೆ ಕೈಗೊಳ್ಳುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 61 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:16.6.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಎಂ.ಜಿ.ರಾಮಮೋಹನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ನೆಲಮಂಗಲ ಮತ್ತು ಶ್ರೀ ಜಿ.ಡಿ. ಶೇಖರ್ ಮೂರ್ತಿ, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ನೆಲಮಂಗಲ ಇವರುಗಳ ವಿರುದ್ದದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ನಡೆಸಲು ಪ್ರಕರಣವನ್ನು ಸದರಿ ನಿಯಮಗಳ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/06/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಎ.ಆರ್.ಎಲ್.ಓ-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ರವರ ಮುಖಾಂತರ)
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.